scales and filling up of unfilled posts of Assistant Executive Engineers by promoting Diploma Engineers. To avoid unpleasantness, Government should hear their grievances and set right things. Please give justice to diploma holders.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯೆಯವರು ಎತ್ತಿದ ವಿಷಯದ ಬಗ್ಗೆ ಪೇ ಆಯೋಗದಲ್ಲಿ ಕಮಿಟಿಯವರು ಏನು ಅಭಿಪ್ರಾಯ ಸೂಚಿಸಿದ್ದಾರೆ ಅದನ್ನು ರಾಜ್ಯ ಸರ್ಕಾರ ಒಪ್ಪಿದೆ. ಆದಾದ ಮೇಲೆ ಜೂನಿಯರ್ ಇಂಜಿನಿಯರುಗಳು ಸೇರಿದಂತೆ ಹಲವಾರು ಮಂದಿ ಸರ್ಕಾರೀ ನೌಕರರು ತಮ್ಮ ಬೇಡಿಕೆಗಳನ್ನು ಇಡುತ್ತಿದ್ದಾರೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಪೇ ಕಮೀಷನ್ ಅನ್ನು ನೇಮಿಸುತ್ತೇವೆಂದು ಮಾನ್ಯ ರಾಜ್ಯಪಾಲರಿಂದ ಹೇಳಿಸಿದ್ದಾರೆ. ಆ ಪೇ ಕಮೀಷನ್ ಮುಂದೆ ಅತೃಪ್ತಿ ಅಸಮಾಧಾನ ಇರತಕ್ಕ ಎಲ್ಲಾ ನೌಕರರು ಹೋಗಬಹುದು. ಪೇ ಕಮೀಷನ್‌ನವರು ಏನು ಅಭಿಪ್ರಾಯಿಸುತ್ತಾರೆ ಅದರ ಬಗ್ಗೆ ಸರ್ಕಾರ ಆಮೇಲೆ ಪರಿಶೀಲಿಸುತ್ತದೆ.

(VIII) ಚಿತ್ರದುರ್ಗ ನಗರಸಭೆಯ ಏಳು ಜನ ಸದಸ್ಯರು ಮುಷ್ಕರ ಮಾಡುತ್ತಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ —ಚಿತ್ರದುರ್ಗ ನಗರಸಭಾ ಅಧ್ಯಕ್ಷರು, ಅಧಿಕಾರಿಗಳ ಮೇಲೆ ಭ್ರಷ್ಟಾಚಾರ, ಅಕ್ರಮ, ಅಪನಿಂದನೆ ಮಾಡಿ ೭ ಜನ ನಗರಸಭಾ ಸದಸ್ಯರುಗಳು ಅನಿರ್ದಿಷ್ಟ ಕಾಲ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ, ಮತ್ತು ಆಡಳಿತ ಪಕ್ಷದ ಸದಸ್ಯರ ಮೇಲೂ ಭ್ರಷ್ಟಾಚಾರದ ಆಪಾದನೆ ಮಾಡಿದ್ದಾರೆ. ಈ ಉಪವಾಸ ಸತ್ಯಾಗ್ರಹದಿಂದ ಊರಿನಲ್ಲಿ ಅಶಾಂತ ಪರಿಸ್ಥಿತಿ ಏರ್ಪಟ್ಟಿದೆ. ಸರ್ಕಾರ ಕೂಡಲೇ ಮಧ್ಯೆ ಪ್ರವೇಶಿಸಿ ತನಿಖೆಗೆ ಆದೇಶ ನೀಡಬೇಕೆಂದೂ ಸತ್ಯಾಗ್ರಹಿಗಳ ಬೇಡಿಕೆಗಳಿಗೆ ಮನ್ನಣೆ ನೀಡಬೇಕೆಂದೂ ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್—ಈಚೆಗೆ ನಾನು ಚಿತ್ರದುರ್ಗದಲ್ಲಿದ್ದಾಗ ಮಾನ್ಯ ಸದಸ್ಯರು ಹೇಳಿದ ಹಾಗೆ ಆಪಾದನೆಗಳನ್ನು ಬಾಯಿ ಮಾತಿನಲ್ಲಿ ಹೇಳುವುದಕ್ಕೆ ಬಂದರು. ನಾನು ಬರವಣಿಗೆಯಲ್ಲಿ ಕೊಡಿ ಎಂದು ಹೇಳಿದೆ. ನಾನು ಹೊರಡುವ ಹೊತ್ತಿಗೆ ಒಂದು ಆಪಾದನೆ ಪಟ್ಟಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ತನಿಖೆ ಮಾಡಿಸಿ ವರದಿ ಬಂದನಂತರ ತಪ್ಪಿತಸ್ಥರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಉಪವಾಸ ಸತ್ಯಾಗ್ರಹ ಮಾಡುವುದು ಬೇಡವೆಂದು ಹೇಳಿದೆ, ಈಗಲೂ ಅದೇ ಮಾತನ್ನು ಹೇಳುತ್ತೇನೆ. ಆಪಾದನೆಯನ್ನು ವಿಚಾರಣೆ ಮಾಡದೆ ಶಿಕ್ಷೆಗೆ ಗುರಿಪಡಿಸತಕ್ಕ ಕಾನೂನು ಇಲ್ಲ ಆದ್ದರಿಂದ ಆಪಾದನೆಗಳನ್ನು ರುಜುವಾತು ಮಾಡಿದ ನಂತರ ಆಪಾದನೆಗಳು ನಿಜವಿದ್ದರೆ ಕ್ರಮ ಕೈಗೊಳ್ಳುತ್ತೇನೆ. ಉಪವಾಸ ಸತ್ಯಾಗ್ರಹವನ್ನು ಪಾಪಸ್ಸು ತೆಗೆದುಕೊಳ್ಳಬೇಕೆಂದು ಸತ್ಯಾಗ್ರಹಿಗಳಲ್ಲಿ ಮತ್ತು ಮಾನ್ಯ ಸದಸ್ಯರಲ್ಲಿ ಕೂಡ ನಾನು ಮನವಿ ಮಾಡಿಕೊಳ್ಳುತ್ತೇನೆ.

(IX) ಉಡುಪಿ ಮಲ್ಪೆ ಪ್ರಾಧಿಕಾರ ಕ್ಷೇತ್ರವನ್ನು ಮನೆಕಟ್ಟಲು ಅನುಮತಿ ನೀಡುವಲ್ಲಿ ತಾರತಮ್ಯ ಮಾಡುತ್ತಿರುವುದು

ಶ್ರೀಮತಿ ಮನೋರಮಾ ಮಧ್ವರಾಜ್.—ಉಡುಪಿ, ಮಲ್ಪೆ ಪ್ರಾಧಿಕಾರ ಕ್ಷೇತ್ರದೊಳಗೆ ಉಡುಪಿ ನಗರಸಭೆ, ಮಲ್ಪೆ ಪಂಚಾಯತ್ ಕ್ಷೇತ್ರವಲ್ಲದೆ ಉತ್ತರದಲ್ಲಿ ಕಲ್ಯಾಣಪುರಹೊಳೆ, ಪೂರ್ವದಲ್ಲಿ ಹೆರ್ಗ ಮತ್ತು ಲಂಡೇ ಬಡಗಬೆಟ್ಟು ಗ್ರಾಮಗಳು, ದಕ್ಷಿಣದಲ್ಲಿ ಉದ್ಯಾವರ ಗ್ರಾಮದ ಸೇತುವೆ ಗಡಿ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಹೀಗೆಯಾಗಿದ್ದು ೧೯ ರೆವಿನ್ಯೂ ಗ್ರಾಮಗಳು ಬರುತ್ತವೆ. ಈ ಕ್ಷೇತ್ರದೊಳಗೆ ಹೊಸದಾಗಿ ಕಟ್ಟಲಿರುವ ಯಾವುದೇ ಕಟ್ಟಡಕ್ಕೆ ಅಥವಾ ಕಟ್ಟಡ ಪುನರ್ ರಚನೆ ನವೀಕರಣಕ್ಕೆ ಪ್ರಥಮ ಅಥವಾ ಪಂಚಾಯತಿಗಳ ಅನುಮತಿ ಪಡೆಯಬೇಕು. ಮತ್ತು ಯೋಜನಾ ಪ್ರಾಧಿಕಾರದ ಮಂಜೂರಾತಿ ದೊರಕಿಸಿಕೊಳ್ಳಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ಹೊಳೆ, ಸಮುದ್ರ ಬಿಟ್ಟು ಉಳಿದೆಲ್ಲಾ ಭಾಗ ಕೃಷಿ ಭೂಮಿಯೆಂದು ನಮೂದಿತವಾಗಿರುವುದರಿಂದ ಕೃಷಿಯೇತರ ಉದ್ದೇಶದ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳಿಂದ ಪರಿವರ್ತನೆ ಮಾಡಿಸಿಕೊಳ್ಳಬೇಕು. ಹೀಗೆ ಈ ಮೂರು ಸಂಕಷ್ಟಕರ ಸಮಸ್ಯೆಗಳಡಿಯಲ್ಲಿ ಸಿಕ್ಕಿ ನಾಗರೀಕರು ವಿಲವಿಲಿ ಒದ್ದಾಡುವಂತಾಗಿದೆ. ವಾಸ್ತವ್ಯದ ಮನೆಗಾಗಿ